ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ	:	2469
ಸದಸ್ಯರ ಹೆಸರು	:	ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	:	23.03.2022.
ಉತ್ತರಿಸುವ ಸಚಿವರು	:	ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು.

ಕ್ರ. ಸಂ	**ಪ್ರಶ್ನೆಗಳು**	**ಉತ್ತರಗಳು**
ಅ)	ರಾಜ್ಯದಲ್ಲಿ ಎಷ್ಟು ನದಿಗಳಲ್ಲಿ ಒಳನಾಡು ಜಲಸಾರಿಗೆ ವ್ಯವಸ್ಥೆಯಿದೆ; (ನದಿಗಳ ಹೆಸರಿನೊಂದಿಗೆ ವಿವರ ನೀಡುವುದು)	• ರಾಜ್ಯದ 05 ನದಿಗಳಲ್ಲಿ ಒಳನಾಡು ಜಲಸಾರಿಗೆ ವ್ಯವಸ್ಥೆ ಇದೆ. ವಿವರಗಳು ಕೆಳಗಿನಂತಿವೆ. • ಹೊನ್ನಾವರದ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಮಂಜುಗುಣಿ - ಗಂಗಾವಳಿ ನದಿ ದಾಟಲು 01, ಹಂಗಾರಕಟ್ಟಾ – ಕೋಡಿಬೆಂಗ್ರೆ 01 ಮಿನಿ ಎಲ್.ಸಿ.ಟಿ ತದಡಿ-ಅಘನಾಶಿನಿ 01 ಮಿನಿ ಎಲ್.ಸಿ.ಟಿ ಒದಗಿಸಲಾಗಿದೆ. • ಬಾಗಲಕೋಟೆ ವಲಯಕ್ಕೆ ಸಂಬಂಧಪಟ್ಟಂತೆ ಕೃಷ್ಣಾ, ಮಲಪ್ರಭಾ, ಘಟಪ್ರಭಾ ನದಿಗಳಲ್ಲಿ ಕಡವುಗಳ ಸೇವೆಗಳನ್ನು ಒದಗಿಸಲಾಗಿದೆ. • ಹುಬ್ಬಳ್ಳಿ ವಲಯಕ್ಕೆ ಸಂಬಂಧಪಟ್ಟಂತೆ ತುಂಗಭದ್ರಾ ನದಿ ಹಾಗೂ ಇತರೆ ಕಡವು ಸೇವೆಗಳನ್ನು ಒದಗಿಸಲಾಗಿದೆ. • ಉಳಿದಂತೆ ಶಿವಮೊಗ್ಗ ವಲಯಕ್ಕೆ ಸಂಬಂಧಪಟ್ಟಂತೆ ಶರಾವತಿ ನದಿಯ ಹಿನ್ನೀರು ಪ್ರದೇಶದಲ್ಲಿ 4 ಎಲ್.ಸಿ.ಟಿ ಗಳನ್ನು ನಡೆಸಲಾಗುತ್ತಿದೆ.

ಆ)	ಸರ್ಕಾರವು ಒಳನಾಡು ಜಲಸಾರಿಗೆ ವ್ಯವಸ್ಥೆಯ ಅಭಿವೃದ್ಧಿಗೆ ಕೈಗೊಂಡ ಕ್ರಮಗಳು ಯಾವುವು; (ವಿವರ ನೀಡುವುದು)	• ಸರ್ಕಾರವು ರಾಜ್ಯದ 4 ಒಳನಾಡು ಜಲಸಾರಿಗೆ ಮಾರ್ಗಗಳನ್ನು ಕೇಂದ್ರ ಸರ್ಕಾರದ ಸಾಗರಮಾಲಾ ಯೋಜನೆ ಹಾಗೂ ಇನ್‌ಲ್ಯಾಂಡ್ ವಾಟರ್ ಅಥಾರಿಟಿ ಆಫ್ ಇಂಡಿಯಾ (IWAI) ಇವರ ಸಹಯೋಗದಲ್ಲಿ ಅಭಿವೃದ್ಧಿ ಪಡಿಸಲು ಕ್ರಮ ಜರುಗಿಸಲಾಗುತ್ತಿದೆ. ವಿವರಗಳು ಈ ಕೆಳಗಿನಂತಿವೆ. 1. ಕಾಳಿ (NW-52) ನದಿಯಲ್ಲಿ ಪ್ರವಾಸೋದ್ಯಮ ಹಾಗೂ ಇತರೆ ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ ತೇಲುವಜೆಟ್ಟಿ ನಿರ್ಮಾಣ, ಜಲಸಾರಿಗೆ ಮಾರ್ಗ ಅಭಿವೃದ್ಧಿ ಹಾಗೂ ಇತರೆ ಪೂರಕ ಮೂಲಭೂತ ಸೌಕರ್ಯಗಳ ನಿರ್ಮಾಣ. 2. ಗುರುಪುರ (NW-43) ನದಿಯಲ್ಲಿ ಪ್ರವಾಸೋದ್ಯಮ ಹಾಗೂ ಪ್ರಯಾಣಿಕರ ಪ್ರಯಾಣಕ್ಕಾಗಿ ಟರ್ಮಿನಲ್ ನಿರ್ಮಾಣ, ರೋ-ರೋ ಜೆಟ್ಟಿಗಳ ನಿರ್ಮಾಣ ಹಾಗೂ ಜಲಸಾರಿಗೆ ಮಾರ್ಗ ಅಭಿವೃದ್ಧಿ ಹಾಗೂ ಇತರೆ ಪೂರಕ ಮೂಲಭೂತ ಸೌಕರ್ಯಗಳ ನಿರ್ಮಾಣ. 3. ಘಟಪ್ರಭಾ ನದಿಯಲ್ಲಿ ಆಲಮಟ್ಟಿಯಿಂದ ಬಾಗಲಕೋಟೆಗೆ ಸಂಚರಿಸಲು ಪ್ರವಾಸೋದ್ಯಮ ಹಾಗೂ ಇತರೆ ಚಟುವಟಿಕೆಗಳಿಗೆ ತೇಲುವಜೆಟ್ಟಿ ನಿರ್ಮಾಣ, ಜಲಸಾರಿಗೆ ಮಾರ್ಗ ಅಭಿವೃದ್ಧಿ ಹಾಗೂ ಇತರೆ ಪೂರಕ ಮೂಲಭೂತ ಸೌಕರ್ಯಗಳ ನಿರ್ಮಾಣ. 4. ಸುವರ್ಣ ನದಿಯಲ್ಲಿ ಮಣಿಪಾಲಿನಿಂದ ಹಂಗಾರಕಟ್ಟವರೆಗೆ ಜಲಮಾರ್ಗಗಳ ತೇಲುವ ಜೆಟ್ಟಿ ನಿರ್ಮಾಣ, ಟರ್ಮಿನಲ್ ನಿರ್ಮಾಣ ಮತ್ತು ಇತರೆ ಪೂರಕ ಮೂಲಭೂತ ಸೌಕರ್ಯಗಳ ನಿರ್ಮಾಣ.
ಇ)	ಈ ಒಳನಾಡು ಜಲಸಾರಿಗೆಯಿಂದ ಎಷ್ಟು ಮೀನುಗಾರರ ಕುಟುಂಬಗಳು ಉದ್ಯೋಗವನ್ನು ಹೊಂದಿವೆ; ಈ ಮೀನುಗಾರರ ಕುಟುಂಬಗಳ ಆರ್ಥಿಕ ಸಶಕ್ತೀಕರಣಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?	• ಈ ಒಳನಾಡು ಜಲಸಾರಿಗೆ ಸೇವೆಯಿಂದ ಮೀನುಗಾರರ ಕುಟುಂಬಗಳು ಒಳಗೊಂಡಂತೆ ಅಂದಾಜು ಸ್ಥಳೀಯ 70 ಕುಟುಂಬಗಳಿಗೆ ಉದ್ಯೋಗ ಸೃಷ್ಟಿಯಾಗಿರುತ್ತದೆ. • ಮೀನುಗಾರರ ಕುಟುಂಬಗಳ ಆರ್ಥಿಕ ಸಶಕ್ತೀಕರಣದ ಬಗ್ಗೆ ಮೀನುಗಾರಿಕಾ ಇಲಾಖೆಯಿಂದ ಕ್ರಮ ಜರುಗಿಸಲಾಗುತ್ತಿದೆ.

IDD 56 PSP 2022 (E-726639)

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು